ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/10/ಉಗ್ರಾಣ/2021-22

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-01, ದಿನಾಂಕ:04-01-2022.

ವಿಷಯ:- ತಾಂತ್ರಿಕ ಶಿಕ್ಷಣ ಇಲಾಖೆಗೆ ಎರಡು ಸಂಖ್ಯೆಯ ಅಂತರ್‌ಜಾಲ (Unlimited data) ಸೇವೆಯನ್ನು ತುರ್ತಾಗಿ ಪೂರೈಸಲು ದರಪಟ್ಟಿ ಕರೆಯುವ ಬಗ್ಗೆ.

ಉಲ್ಲೇಖ:- ಎಂ. ಎಸ್ ಶ್ರೀನಿವಾಸ , ಉಪನ್ಯಾಸಕರು, ಗಣಕ ಯಂತ್ರ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ ಇವರ ಕೋರಿಕೆ ಪತ್ರದ ದಿನಾಂಕ:01/12/2021.

*****

ಉಲ್ಲೇಖಿತ ಪತ್ರದಂತೆ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ಕಛೇರಿ ಸಂಬಂಧಿತ ಅಂತರ್‌ಜಾಲ ಕಾರ್ಯಗಳನ್ನು ನಿರ್ವಹಿಸಲು ಎರಡು ಸಂಖ್ಯೆಯ ಅಂತರ್‌ಜಾಲ (Unlimited data) ಸೇವೆಯನ್ನು ಪೂರೈಸುವಂತೆ ಉಲ್ಲೇಖದಲ್ಲಿ ಕೋರಿರುತ್ತಾರೆ. ತಾಂತ್ರಿಕ ಶಿಕ್ಷಣ ಇಲಾಖೆಗೆ ಸರಬರಾಜುದಾರರಿಂದ ಕೊಟೇಷನ್/ದರಪಟ್ಟಿ ಕರೆಯಲಾಗಿದೆ ಅತಿ ಕಡಿಮೆ ದರ (ತೆರಿಗೆ ಸೇರಿ) ಸೂಚಿಸಿ, " ಆಯುಕ್ತರು ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, *ಅರಮನೆ ರಸ್ತೆ, ಬೆಂಗಳೂರು-1"* ಇವರ ಹೆಸರಿಗೆ ಕೊಟೇಷನ್ ಬರೆದು ಅದನ್ನು ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, *ಅರಮನೆ ರಸ್ತೆ, ಬೆಂಗಳೂರು-1"* ಇವರ ವಿಳಾಸಕ್ಕೆ *ದಿನಾಂಕ: 15/01/2022 ರ ಅಪರಾಹ್ನ 2.00 ಗಂಟೆ* ಒಳಗಾಗಿ ತಲುಪುವಂತೆ ಕಳುಹಿಸಿಕೊಡಲು ಕೋರಲಾಗಿದೆ. ಲಕೋಟೆಯ ಮೇಲೆ "*ದಿನಾಂಕ: 16/01/2022 ರಂದು ಕೊನೆಯಾಗುವ ಅಂತರ್‌ಜಾಲ ಸರಬರಾಜಿಗಾಗಿ ದರಪಟ್ಟಿ"* ಎಂದು ತಪ್ಪದೇ ನಮೂದಿಸುವುದು.

ದರಪಟ್ಟಿಯ ನಿಯಮ ನಿಬಂಧನೆಗಳು

1. ಮೇಲ್ಕಂಡ ಅಂತರ್‌ಜಾಲ ಬಾಡಿಗೆ ಆಧಾರದ ಮೇಲೆ ವಾರ್ಷಿಕ ನಿರ್ವಹಣೆಯ ದರಪಟ್ಟಿ ಸಲ್ಲಿಸುವಂತೆ ಹಾಗೂ ಪೂರೈಸಲು ದರ ಗರಿಷ್ಠ ಒಂದು ಲಕ್ಷ ಮಿತಿಗೊಳಪಟ್ಟಿರುತ್ತದೆ. ಕಡಿಮೆ ದರ ಸೂಚಿಸಿದ ಸರಬರಾಜುದಾರರು, ಸೂಚಿಸಿದ ದರವು ಒಂದು ವರ್ಷ ಚಾಲ್ತಿಯಲ್ಲಿದ್ದು, ಯಾವಾಗ ಬೇಕಾದರೂ ಯಾವುದೇ ಮುನ್ಸೂಚನೆಯಿಲ್ಲದೇ ಬಾಡಿಗೆಯನ್ನು ರದ್ದುಪಡಿಸಬಹುದು.
2. ಮೇಲ್ಕಂಡ ಅಂತರ್‌ಜಾಲ ಬಾಡಿಗೆ ಮತ್ತು ನಿರ್ವಹಣೆಗೆ ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
3. ಮೇಲ್ಕಂಡ ಅಂತರ್‌ಜಾಲ ನಿರ್ವಹಣೆಗೆ ಸೂಚಿಸಿರುವ ದರವು ಎಲ್ಲಾ ಎಲೆಕ್ಟ್ರಾನಿಕ್ಸ್/ಮೆಕ್ಯಾನಿಕಲ್ ವಸ್ತುಗಳನ್ನು ಸೇರಿ ಹಾಗೂ ಎಲ್ಲಾ ತೆರಿಗೆಗಳನ್ನು ಸೇರಿ ಒಳಗೊಂಡಿರುತ್ತದೆ.
4. ತಾವು ಅಧಿಕೃತ ನಿರ್ವಹಣೆದಾರರೆಂಬ ಬಗ್ಗೆ ಅಥವಾ ಬೇರೆ ಬೇರೆ ಸರ್ಕಾರಿ ಇಲಾಖೆಗಳಲ್ಲಿ ಬಾಡಿಗೆ ಮತ್ತು ನಿರ್ವಹಣೆ ಮಾಡಿರುವ /ಮಾಡುತ್ತಿರುವ ಬಗ್ಗೆ ದಾಖಲೆಯನ್ನು ನೀಡಬೇಕಾಗಿರುತ್ತದೆ.
5. ಅಂತರ್‌ಜಾಲನ್ನು ನಿರ್ವಹಕರು /ಉಪನ್ಯಾಸಕರು, ದೂರವಾಣಿ ಮೂಲಕ ತಿಳಿಸಿದಲ್ಲಿ, ಕೂಡಲೇ ಹಾಜರಾಗಿ ಸೂಚಿಸುವ ಸ್ಥಳದಲ್ಲಿ / ಸೂಚಿಸುವ ಸಮಯದಲ್ಲಿ ಅಳವಡಿಸುವುದು ಮತ್ತು ಕಾರ್ಯಕ್ಷಮತೆಯನ್ನು ನೋಡಿಕೊಳುವುದು.

6. ಅಂತರ್‌ಜಾಲ ಬಾಡಿಗೆ ರೂಪದಲ್ಲಿ ಪೂರೈಕೆ ಮಾಡಿ ನಿರ್ವಹಣೆ ಮಾಡುವ ಮೊದಲು ಷರತ್ತುಗಳನ್ನು ಒಪ್ಪಿ ರೂ. 100 ಗಳ ಕರಾರು ಪತ್ರ ನೀಡಬೇಕು.

7. ಅಂತರ್‌ಜಾಲ ಬಾಡಿಗೆ ಮತ್ತು ನಿರ್ವಹಣೆ ವೆಚ್ಚವನ್ನು , ನಿರ್ವಹಕರು /ಉಪನ್ಯಾಸಕರು, ಇವರು ತೃಪ್ತಿಕರವಾಗಿ ಕಾರ್ಯನಿರ್ವಹಿಸಿರುವುದನ್ನು ಪರಿಶೀಲಿಸಿ ದೃಢೀಕರಣ ನೀಡಿದ ನಂತರವೇ, ಬಿಲ್ಲಿನ ಮೊತ್ತವನ್ನು ನಿಯಮಾನುಸಾರ ಸಂದಾಯ ಮಾಡಲಾಗುವುದು.

8. ಅಂತರ್‌ಜಾಲ ಬಾಡಿಗೆ ಮತ್ತು ನಿರ್ವಹಣೆ ವೆಚ್ಚದ ಹಣ ಪಾವತಿಗಾಗಿ ಬಿಲ್ಲಿನ ನಾಲ್ಕು ಪ್ರತಿಗಳನ್ನು ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-1, ಇವರ ಹೆಸರಿಗೆ ಬರೆದು "ಆಯುಕ್ತರ ಕಛೇರಿ, ತಾಂತ್ರಿಕ ಶಿಕ್ಷಣ ಇಲಾಖೆ, ಅರಮನೆರಸ್ತೆ, ಬೆಂಗಳೂರು-1 ಇವರ ವಿಳಾಸಕ್ಕೆ ಕಳುಹಿಸಿ ಕೊಡುವುದು.

9. ಸರಬರಾಜುದಾರರು ಸರ್ಕಾರ/ನಿರ್ದೇಶಕರು, ಆಯುಕ್ತರು, ತಾಂತ್ರಿಕ ಶಿಕ್ಷಣ ಇಲಾಖೆ, ರವರುಗಳು ಕಾಲಕಾಲಕ್ಕನುಗುಣವಾಗಿ ಬದಲಾಯಿಸುವ ದರಪಟ್ಟಿ ನಿಯಮ ಮತ್ತು ನಿಬಂಧನೆಗಳಿಗೆ ಬದ್ಧರಾಗಿತಕ್ಕದ್ದು.

10. ದರಪಟ್ಟಿ ಸಲ್ಲಿಸುವ ಅರ್ಹ ಸರಬರಾಜುದರರು ಜಿ.ಎಸ್.ಟಿ ಸಂಖ್ಯೆಯನ್ನು ಹಾಗೂ ಪಾನ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಲು ಸೂಚಿಸಲಾಗಿದೆ.

11. ಅನುದಾನದ ಲಭ್ಯತೆಯ ಅನುಸಾರ ಬಿಲ್ಲಿನ ಮೊತ್ತವನ್ನು ಸಂದಾಯ ಮಾಡಲಾಗುವುದು.

ಜಂಟಿ ನಿರ್ದೇಶಕರು(ಆಡಳಿತ)
ತಾಂತ್ರಿಕ ಶಿಕ್ಷಣ ಇಲಾಖೆ ಬೆಂಗಳೂರು. 5/1/22

ಇವರಿಗೆ,

1. ಡಿಟಿಇ ವೆಬ್‌ಸೈಟ್ ಇ-ಗವರ್ನರ್ಸ್ ವಿಭಾಗ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು . ಪ್ರಕಟಿಸಿದ ಬಗ್ಗೆ ದಾಖಲೆ ಸಂರಕ್ಷಿಸಲು ಸೂಚಿಸಿದೆ.
2. ನಿರ್ದೇಶನಾಲಯದ ಸೂಚನಾ ಫಲಕ.